## ಪ್ರಾರ್ಥನೆ

(ಶ್ರೀಶಂಕರಾಚಾರ್ಯರ ಸ್ತೋತ್ರಗಳಿಂದ)

ವಿಶುದ್ಧಂ ಪರಂ ಸಚ್ಚಿದಾನಂದರೂಪಂ
ಗುಣಾಧಾರಮಾಧಾರಹೀನಂ ವರೇಣ್ಯಂ ।
ಮಹಾಂತಂ ವಿಭಾಂತಂ ಗುಹಾಂತಂ ಗುಣಾಂತಂ
ಸುಖಾಂತಂ ಸ್ವಯಂಧಾಮ ರಾಮಂ ಪ್ರಪದ್ಯೇ ॥

—ಶ್ರೀರಾಮಭುಜಂಗಪ್ರಯಾತ ಸ್ತೋತ್ರಂ

ಅತ್ಯಂತ ಪರಿಶುದ್ಧನೂ, ಸರ್ವಶ್ರೇಷ್ಠನೂ, ಸಚ್ಚಿದಾನಂದ ಸ್ವರೂಪಿಯೂ, ಸಕಲ ಸದ್ಗುಣಾಶ್ರಯನೂ, ಎಲ್ಲರಿಂದ ಸ್ತುತಿಸಲ್ಪಡುವವನೂ, ಸರ್ವವ್ಯಾಪಕನೂ, ವಿಶೇಷ ಕಾಂತಿಯಿಂದ ಬೆಳಗುವವನೂ, ಎಲ್ಲ ಜೀವಿಗಳ ಹೃದಯಗುಹೆಯಲ್ಲಿ ನೆಲೆಸಿರುವವನೂ, ಸತ್ತ್ವರಜಸ್ತಮೋ ಗುಣಗಳಿಗೆ ಅಧೀನ-ನಾಗದವನೂ ಆದ ಶ್ರೀರಾಮಚಂದ್ರನನ್ನು ಆಶ್ರಯಿಸುತ್ತೇನೆ.

ಅವಿನಯಮಪನಯ ವಿಷ್ಣೋ!
ದಮಯ ಮನಃ ಶಮಯ ವಿಷಯಮೃಗತೃಷ್ಣಾಂ ।
ಭೂತದಯಾಂ ವಿಸ್ತಾರಯ ತಾರಯ ಸಂಸಾರಸಾಗರತಃ ॥

—ವಿಷ್ಣು ಷಟ್ಪದೀ ಸ್ತೋತ್ರಂ

ಹೇ ಭಗವಂತ! ನನ್ನ ಅವಿನಯವನ್ನು ದೂರಮಾಡು. ಮನಸ್ಸನ್ನು ನಿಯಂತ್ರಿಸುವ ಶಕ್ತಿಯನ್ನು ಕೊಡು. ಇಂದ್ರಿಯಸುಖವೆಂಬ ಬಿಸಿಲ್ಗುದುರೆಯನ್ನು ಅತಿಯಾಗಿ ಬೆನ್ನಟ್ಟಿ ಹೋಗದಂತೆ ನೋಡಿಕೋ. ಸಕಲ ಪ್ರಾಣಿಗಳಲ್ಲಿ ದಯೆಯಿಂದ ಕೂಡಿರುವಂತೆ ಅನುಗ್ರಹಿಸು. ನನ್ನನ್ನು ಈ ಸಂಸಾರಸಾಗರದಿಂದ ದಾಟಿಸು.

ತ್ವತ್ತೋ ಜಗದ್ಭವತಿ ದೇವ ಭವ ಸ್ಮರಾರೇ
ತ್ವಯ್ಯೇವ ತಿಷ್ಠತಿ ಜಗನ್ಮೃಡ ವಿಶ್ವನಾಥ ।
ತ್ವಯ್ಯೇವ ಗಚ್ಛತಿ ಲಯಂ ಜಗದೇತದೀಶ
ಲಿಂಗಾತ್ಮಕೇ ಹರ ಚರಾಚರವಿಶ್ವರೂಪಿನ್ ॥

—ವೇದಸಾರ ಶಿವಸ್ತೋತ್ರಂ

ಹೇ ಮನ್ಮಥನ ಶತ್ರುವೇ! ಜಗತ್ತಿನ ಸೃಷ್ಟಿ ನಿನ್ನಿಂದ; ಅದು ಉಳಿಯುವುದೂ ನಿನ್ನಿಂದ; ಅಳಿಯುವುದೂ ನಿನ್ನಿಂದ. ಹೇ ಮೃಡ ವಿಶ್ವನಾಥ! ಚರಾಚರರೂಪಿಯಾದ ವಿಶ್ವಸ್ವರೂಪಿಯೇ ನೀನಾಗಿರುವೆ.

## ಸೂಕ್ತಿಪ್ರಭ

- ನಿಮ್ಮ ಕಣ್ಣುಗಳು ಮಧುರವಾಗಿದ್ದರೆ, ಜಗದ ಜನರೆಲ್ಲ ಒಳ್ಳೆಯವರಾಗಿ ಕಂಡುಬರುತ್ತಾರೆ. ನಿಮ್ಮ ನಾಲಿಗೆ ಮಧುರವಾಗಿದ್ದರೆ, ಜಗದ ಜನರೆಲ್ಲ ನಿಮ್ಮನ್ನು ಹುಡುಕಿಕೊಂಡು ಬರುತ್ತಾರೆ.
- ನಕ್ಷತ್ರಗಳನ್ನು ನಂಬುವುದಕ್ಕಿಂತ ಅವುಗಳನ್ನು ಮಾಡಿದ ಸೃಷ್ಟಿಕರ್ತನ ಕೃಪೆಯಲ್ಲಿ, ಅವನು ನಮಗೆ ನೀಡಿರುವ ಸಾಮರ್ಥ್ಯಗಳಲ್ಲಿ ನಂಬಿಕೆ ಇಡುವುದು ಉಚಿತವಲ್ಲವೇ?
- ಪ್ರತಿಭೆಗಿಂತ ಅನುಕಂಪೆಯೇ ಹೆಚ್ಚು ಉಪಯುಕ್ತ. ಕೆಲವೊಮ್ಮೆ, ಮನುಷ್ಯನಿಗೆ ಅದ್ಭುತ ಆಲೋಚನಾ ಸಾಮರ್ಥ್ಯವುಳ್ಳ ಮನಸ್ಸಿಗಿಂತ, ಮಾತಿನ ಚಕಮಕಿಯನ್ನು ಹೊರಡಿಸಬಲ್ಲ ಮನಸ್ಸಿಗಿಂತ ಇತರರ ಕಷ್ಟದುಃಖಗಳನ್ನು ಕೇಳುವ ತಾಳ್ಮೆಯ ಹೃದಯವೇ ಹೆಚ್ಚು ತಂಪನ್ನು ನೀಡಬಲ್ಲದು.
- ಶ್ರದ್ಧೆಯೆಂದರೆ ಎರಡು ಕೈಗಳನ್ನು ಬಿಚ್ಚಿ ಹರಡಿಕೊಂಡು, ಭಗವಂತನನ್ನು ಸ್ವೀಕರಿಸಲು ಸಿದ್ಧನಾಗಿರುವುದು.
- ಸಣ್ಣಪುಟ್ಟ ವಿಷಯಗಳು ಕೆಲವೊಮ್ಮೆ ದೊಡ್ಡ ಘಟನೆಗಳಿಗಿಂತ ನೋವನ್ನು ನೀಡಬಲ್ಲವು. ನೀವು ಬೆಟ್ಟದ ತುದಿಯ ಮೇಲೆ ಕುಳಿತುಕೊಳ್ಳಬಹುದು. ಆದರೆ ಸೂಜಿಯ ಮೊನೆಯ ಮೇಲೆ ಕೂಡಲಾರಿರಿ.
- ದ್ವೇಷವನ್ನು ಹೇಳಿಕೊಡುವ ಧರ್ಮಗಳು ನಮ್ಮಲ್ಲಿ ಹೇರಳವಾಗಿವೆ; ಪರಸ್ಪರ ಪ್ರೀತಿಯನ್ನು ಉಪದೇಶಿಸುವ ಧರ್ಮ ವಿರಳ. —ಜೊನಾಥನ್ [illegible]
- ಭಗವಂತನನ್ನು ಪ್ರೀತಿಸುವುದು ಹಾಗೂ ನೆರೆಹೊರೆಯವರನ್ನು ಪ್ರೀತಿಸುವುದು - ಇವು ನೈಜ ಆಧ್ಯಾತ್ಮಿಕ ವ್ಯಕ್ತಿಯ ಎರಡು ಮುಖಗಳು: ಒಂದು ಅಂತರಂಗದ ಕ್ರಿಯೆ, ಮತ್ತೊಂದು ಬಹಿರಂಗದ್ದು. —ಡಾ ಎಸ್ ರಾಧಾಕೃಷ್ಣನ್
- ಧೈರ್ಯವೆಂದರೆ ಮುನ್ನಡೆಯುವ ಶಕ್ತಿಯನ್ನು ಹೊಂದಿರುವುದಲ್ಲ, ಶಕ್ತಿಯಿಲ್ಲದಿರುವಾಗ ಮುನ್ನಡೆಯುವುದು. —ನೆಪೋಲಿಯನ್ ಬೋನಾಪಾರ್ಟೆ
- ನೀವು ಸತ್ಯ, ಪ್ರೇಮಗಳನ್ನು ಕುರಿತು ಭಾವಿಸಿ. ಇವೇ ಧರ್ಮದ ಸಾರ. —ಡಾ ಎಸ್ ರಾಧಾಕೃಷ್ಣನ್
- ಮಾತಿಗಿಂತ ಮೌನವೇ ಲೇಸು. ಮಾತಾಡಿದರೆ, ಸತ್ಯವನ್ನೇ ನುಡಿ. ಆ ಸತ್ಯವು ಹಿತವಾಗಿರಲಿ. ಹಿತವಾಗಿದ್ದರೆ ಸಾಲದು, ಅದು ಧರ್ಮಕ್ಕೆ ವಿರೋಧವಾಗದಿರಲಿ. —ವಿದುರನೀತಿ